ದಿನಾಂಕ: ಫೆಬ್ರವರಿ 16, 2014

# ಸಂಸತ್‌ನಲ್ಲಿ ಶಾಸನ ರಚನೆಗೆ ಅಡ್ಡಿಪಡಿಸಲು ಕಾಂಗ್ರೆಸ್ ಹೊಣೆಯಾಗಿದೆಯೇ?

-ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಸಂಸತ್ ಅಧಿವೇಶನದ ಕಡೆಯ ವಾರಕ್ಕೆ ಕಾಲಿಟ್ಟ ನಾವು, ಕೇಳಬಯಸುವ ಪ್ರಾಮಾಣಿಕ ಪ್ರಶ್ನೆಯೆಂದರೇ- ಶಾಸನಗಳು ಇತ್ಯರ್ಥವಾಗದೆ ಉಳಿಯಲು ಕಾರಣಕರ್ತರು ಯಾರು? ಸಂಸತ್‌ನಲ್ಲಿ ಭ್ರಷ್ಟಾಚಾರ ನಿಗ್ರಹ ಮಸೂದೆಗೆ ಭಾಜಪ ಅಡ್ಡಿ ಪಡಿಸಿದೆ ಎಂದು ನಿನ್ನೆ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಆಪಾದನೆ ಮಾಡಿದ್ದಾರೆ.

ಯುಪಿಎ ಸರ್ಕಾರದ 10 ವರ್ಷಗಳ ಅಧಿಕಾರಾವಧಿಯ ಅಂತಿಮ ಹಂತದಲ್ಲಿ ಕೆಲವಾರು ಮಸೂದೆಗಳನ್ನು ಕಾಂಗ್ರೆಸ್ ರೂಪಿಸಿದೆ. ಈ ಅವಧಿಯಲ್ಲಿ ಪಕ್ಷವು ಎರಡೂ ಸದನಗಳಲ್ಲೂ ತನ್ನ ಬಹುಮತ ಕಳೆದುಕೊಂಡಿದೆ. ಈಗ ಪ್ರಸ್ತಾಪಿಸಿರುವ ಶಾಸನಗಳು ಮತ್ತು ಬೀದಿ ವ್ಯಾಪಾರಿಗಳಿಗೆ ರಕ್ಷಣೆ ಹಾಗೂ ಬುಂದೇಲ್‌ಖಂಡ್‌ನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪಿಸುವ ಶಾಸನಗಳು ಯಾವುದೇ ವಿವಾದ ಹೊಂದಿಲ್ಲ. ಅಲ್ಪಾವಧಿಯ ಚರ್ಚೆಯ ನಂತರ ಈ ಮಸೂದೆಗಳನ್ನು ಅಂಗೀಕರಿಸಬಹುದು. ವಿಕಲಚೇತನರಿಗೆ ಸಂಬಂಧಿಸಿದ ಕಾನೂನುಗಳಿಗೆ ಸ್ವೀಕೃತಿ ನೀಡಬೇಕು ಎಂದು ಹಲವಾರು ಸಂಘ ಸಂಸ್ಥೆಗಳು ಒತ್ತಾಯಿಸಿವೆ. ಭ್ರಷ್ಟಾಚಾರ ನಿಗ್ರಹ ಕಾನೂನಿನ ಅಸ್ವೀಕೃತಿಗೆ ರಾಹುಲ್ ಗಾಂಧಿಯವರು ನಿನ್ನೆ ಭಾಜಪವನ್ನು ಹೊಣೆಗಾರರಾಗಿ ಮಾಡಿದಂತೆ, ಅನ್ಯ ಶಾಸನಗಳ ವಿಚಾರದಲ್ಲೂ ಸಂಬಂಧಪಟ್ಟವರ ಮುಂದೆ ಇದೇ ಆರೋಪ ಹೊರಿಸಲಾಗುತ್ತಿದೆ.

ಈ ವಿಚಾರದಲ್ಲಿ ವಾಸ್ತವ ಸಂಗತಿಯನ್ನು ತಿಳಿಸಲೇಬೇಕಾಗುತ್ತದೆ. ಮೇಲ್ಕಂಡ ಶಾಸನದ ಕುರಿತು ಭಾಜಪ ಯಾವುದೇ ತಕರಾರು ಮಾಡಿಲ್ಲ. ನಮ್ಮ ಬೆಂಬಲ ನೀಡಲು ಸಿದ್ಧರಿದ್ದೇವೆ. ಎರಡೂ ಸದನಗಳ ಕಲಾಪಕ್ಕೆ ಭಾಜಪದ ಯಾವುದೇ ಸದಸ್ಯರು ಅಡ್ಡಿ ಪಡಿಸಿಲ್ಲ. ಸದನದ ಬಾವಿಗೆ ಯಾವುದೇ ಭಾಜಪ ಸದಸ್ಯನೂ ಇಳಿದಿಲ್ಲ. ಪ್ರತಿನಿತ್ಯ ಸಂಸತ್ ಸದನಕ್ಕೆ ಹಾಜರಾಗುತ್ತಿದ್ದೇವೆ. ಆಂಧ್ರಪ್ರದೇಶ ವಿಭಜನೆ ವಿಚಾರ ಇತ್ಯರ್ಥವಾಗದ ಕಾರಣ ಎರಡೂ ಸದನಗಳಲ್ಲಿ ಕೋಲಾಹಲ ಹೆಚ್ಚಿದೆ. ಗದ್ದಲದ ಸನ್ನಿವೇಶದಲ್ಲಿ ಸದನ ನಡೆಸಲು ಸಾಧ್ಯವಾಗದ ಕಾರಣ ಸಭಾಧ್ಯಕ್ಷರು ಹಾಗೂ ಸಭಾಪತಿಗಳು ಸದನವನ್ನು ಮುಂದೂಡುತ್ತಿದ್ದಾರೆ. ಪ್ರತಿನಿತ್ಯ ಸದನಗಳಲ್ಲಿ ಕೋಲಾಹಲ ಎಬ್ಬಿಸುವವರಲ್ಲಿ ಹೆಚ್ಚಿನವರು ಕಾಂಗ್ರೆಸ್ ಸದಸ್ಯರಾಗಿದ್ದಾರೆ. ತಮ್ಮ ಪಕ್ಷದ ಸದಸ್ಯರು ಸೃಷ್ಟಿಸುವ ಗೊಂದಲ ಕೋಲಾಹಲ ನೋಡುವ ಅಥವಾ ಸದನದ ಕಲಾಪದಲ್ಲಿ ಭಾಗವಹಿಸುವ ಸಮಯ ರಾಹುಲ್ ಗಾಂಧಿಯವರ ಹತ್ತಿರ ಇದ್ದಂತಿಲ್ಲ. 2ಜಿ ತರಂಗಾಂತರ ಹಂಚಿಕೆ, ಕಲ್ಲಿದ್ದಲು ನಿಕ್ಷೇಪ ಹಂಚಿಕೆ, ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜನೆಯಲ್ಲಿ ನಡೆದ ಭಾರಿ ಭ್ರಷ್ಟಾಚಾರದ ವಿಚಾರದಲ್ಲಿ ಮೌನ ಸಾಧಿಸಿರುವ ಅವರು ಭಾರತೀಯ ರಾಜಕಾರಣದಲ್ಲಿ ಭ್ರಷ್ಟಾಚಾರದ ವಿಚಾರ ಪ್ರಾಮುಖ್ಯತೆ ಪಡೆದಿದೆ ಎಂಬ ಸತ್ಯವನ್ನು ತಡವಾಗಿ ಅರ್ಥಮಾಡಿಕೊಂಡಂತಿದೆ. ತಡವಾಗಿಯಾದರೂ ಈ ಸತ್ಯವನ್ನು ಅರ್ಥಮಾಡಿಕೊಂಡ ಅವರು ತಮ್ಮ ಬೆನ್ನು ತಟ್ಟಿಕೊಳ್ಳುವ ಬದಲು ಹಾಗೂ ಆಡಳಿತಾವಧಿಯ ಕಡೆ ಕ್ಷಣದಲ್ಲಿ ರಚಿಸಿದ ಶಾಸನಕ್ಕೆ ಆತ್ಮಸ್ತುತಿ ಮಾಡಿಕೊಳ್ಳುವ ಬದಲು, ಆತ್ಮಾವಲೋಕನ ನಡೆಸಿ, ಶಾಸನ ರಚನೆಯಲ್ಲಿ ವಿಳಂಬವಾಗಲು ನಿಜವಾದ ಕಾರಣವನ್ನು ರಾಹುಲ್ ಗಾಂಧಿ ಹುಡುಕುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಸದನದಲ್ಲಿ ಕೋಲಾಹಲ

ನಡೆಸುತ್ತಿರುವುದು ಕಾಂಗ್ರೆಸ್ ಸದಸ್ಯರಾಗಿದ್ದಾರೆ. ಸದನದಲ್ಲಿ ಶಿಸ್ತು ಸಂಯಮ ಕಾಪಾಡುವಲ್ಲಿ ಸರ್ಕಾರ ವಿಫಲವಾದ್ದರಿಂದ ಶಾಸನರಚನೆಯಾಗಿಲ್ಲ. ಇದನ್ನು ರಾಹುಲ್ ಗಾಂಧಿ ಅರ್ಥಮಾಡಿಕೊಂಡು ಸುಗಮ ಕಲಾಪಕ್ಕೆ ಸೂಕ್ತ ಕ್ರಮತೆಗೆದುಕೊಂಡರೆ ಶಾಸನ ರಚನೆಯಲ್ಲಿ ತಮ್ಮ ಬೆಂಬಲ ನೀಡುವಲ್ಲಿ ಭಾಜಪಗೆ ಯಾವುದೇ ಸಮಸ್ಯೆಯಿಲ್ಲ.

★★★★★